ಪುಣ್ಯಕ್ಕೆ ಬರ್ಗರ್‌ನ ವಿಷಯ ಬರಲಿಲ್ಲವಲ್ಲ!!... ನಿನಗೆ ಧನ್ಯವಾದ... ಅಂದರೆ, ಶರ್ಮಿಳಾಳ ಮನೆಯಲ್ಲಿ ಅದರ ಬಗ್ಗೆ ಏನೂ ಗದ್ದಲ ನಡೆದಿಲ್ಲ ಎಂದಾಯಿತು... ಅಬ್ಬಾ, ಒಳ್ಳೆಯದೇ ಆಯ್ತು" ಎಂದುಕೊಳ್ಳುತ್ತ ಇರ್ನ ತನ್ನ ಪುಸ್ತಕವನ್ನು ತೆರೆದಳು.

ಮಧ್ಯಾಹ್ನದ ಬಿಡುವಿನ ಸಮಯದಲ್ಲಿ ಇರ್ನ ಇನ್ನೇನು ಎದ್ದು ನಿಲ್ಲಬೇಕೆನ್ನುವಷ್ಟರಲ್ಲಿಯೇ ಶರ್ಮಿಳಾ ಅವಳ ಹತ್ತಿರ ಓಡಿ ಬಂದಳು. ಅವಳ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, "ಬಾ, ನಿನ್ನೊಂದಿಗೆ ಮಾತಾಡುವುದಿದೆ"ಎನ್ನುತ್ತ ಅವಳನ್ನು ಹೊರಗೆ ಕರೆದೊಯ್ದಳು.

"ಹೇಳು... ನಿನ್ನಿನ ಆ ಬರ್ಗರ್ ಇತ್ತಲ್ಲ... ಓ!!..."

ಇರ್ನಯ ಹೃದಯ ಜೋರಾಗಿ ಬಡಿದುಕೊಳ್ಳತೊಡಗಿತು.

"ಅದು ನಿನ್ನ ಅಮ್ಮ ತಯಾರಿಸಿದ್ದೆ?..." ಶರ್ಮಿಳಾ ಮತ್ತೊಂದು ಪ್ರಶ್ನೆ ಕೇಳಿದಳು.

ಏನು ಹೇಳಬೇಕೆಂಬುದೇ ಇರ್ನಗೆ ಹೊಳೆಯುತ್ತಲಿಲ್ಲ. ಸುಳ್ಳು ಮಾತ್ರ ಹೇಳಬಾರದೆಂದುಕೊಂಡ ಅವಳು "ಆಂ... ಹೌದು" ಎಂದಷ್ಟೇ ಉತ್ತರಿಸಿದಳು.

"ಆ ಬರ್ಗರ್ ಅನ್ನು ಹೇಗೆ ಮಾಡುತ್ತಾರೆ?" ಶರ್ಮಿಳಾಳ ದನಿಯಲ್ಲಿ ಬರ್ಗರ್‌ನ ವಿವರಗಳನ್ನು ತಿಳಿದುಕೊಳ್ಳುವ ಕುತೂಹಲ ಇತ್ತು. ಅವಳ ತಾಯಿಗೆ ಸಂಶಯ ಬಂದು, ಅದರ ರಹಸ್ಯವೇನೆಂಬುದನ್ನು ತಿಳಿದುಕೊಳ್ಳಲು ಹೇಳಿದ್ದರೆಂದು ತೋರುತ್ತದೆ. "ಅದನ್ನು ಹೇಗೆ ಮಾಡುತ್ತಾರೋ ಏನೋ... ನನಗೆ ಗೊತ್ತಿಲ್ಲ..." ಎಂದಷ್ಟೇ ಉತ್ತರಿಸಿದಳು ಇರ್ನ.

"ಓಹೋ... ಹಾಗಾ?... ಇರಲಿ ಬಿಡು. ನಾನು ನಿನಗೆ ನಂತರ ಫೋನ್ ಮಾಡುತ್ತೇನೆ. ಬರ್ಗರ್‌ನ ಬಗೆಗೆ ನಿನ್ನ ತಾಯಿಯ ಜೊತೆ ಮಾತಾಡಿ ನನಗೆ ಹೇಳು. ಇದೇ ತರದ ರುಚಿಯ ಬರ್ಗರ್ ತಯಾರಿಸಿ ಕೊಡಲು ನಾನು ನನ್ನ ತಾಯಿಗೆ ಕೇಳಿರುವೆ. ಆ ಬರ್ಗರ್‌ನ ನಾನು ಎಷ್ಟು ಖುಷಿಪಟ್ಟು ತಿಂದೆ ಗೊತ್ತಾ? ಓಹ್!! ಅದು ತುಂಬಾ ರುಚಿಯಾಗಿತ್ತು" ಎಂದಳು ಶರ್ಮಿಳಾ.

ಸಂಜೆ ಹೇಳಿದ ಸಮಯಕ್ಕೆ ಸರಿಯಾಗಿ ಶರ್ಮಿಳಾ ಫೋನ್ ಮಾಡಿಯೇಬಿಟ್ಟಳು. ಇರ್ನಗೆ ಸುಳ್ಳು ಹೇಳುವುದು ಇಷ್ಟವಿರಲಿಲ್ಲವಾದರೂ ಅವಳು ಫೋನ್‌ನಲ್ಲಿ "ಕ್ಷಮಿಸು ಶರ್ಮಿಳಾ, ಅಮ್ಮ ಎಲ್ಲೋ ಹೊರಗೆ ಹೋಗಿದ್ದಾರೆ. ಆದರೆ, ನಾನು ಅವರನ್ನು ಕೇಳಿದಾಗ, ಇದೇ ಬಗೆಯ ರುಚಿಕರ ಬರ್ಗರ್‌ಗಳು ತಿನ್ನುವ ವಸ್ತುಗಳನ್ನು ಮಾರುವ ಯಾವ ಅಂಗಡಿಗಳಲ್ಲಿ ಬೇಕಾದರೂ ಸಿಗುತ್ತವೆಯೆಂದು ಹೇಳಿದರು" ಎಂದು ಸುಳ್ಳು ಹೇಳಿದಳು.

"ಹೌದು ಇರ್ನ, ಬರ್ಗರ್‌ಗಳು ಯಾವ ಅಂಗಡಿಗಳಲ್ಲಾದರೂ ಸಿಗುತ್ತವೆಯೆಂಬುದು ನನಗೂ ಗೊತ್ತು. ಆದರೆ, ನಿಮ್ಮ ಅಮ್ಮ ಮಾಡಿದ ಆ ಬರ್ಗರನ್ನು ಯಾವ ಹೆಸರಿನಿಂದ

**'ಇರ್ನ, ನೀನು ಸದ್ಯ ನಿನ್ನ ಗೆಳತಿಯಿಂದ ದೂರ ಇದ್ದುಬಿಡು. ಯಾಕೆಂದರೆ, ಇಂದಲ್ಲ ನಾಳೆ ಈ ವಿಷಯ ಅವರ ಮನೆಯಲ್ಲಿ ಗೊತ್ತಾಗಿ ಬಿಟ್ಟರೆ, ಅದಕ್ಕೆ ನೀನೇ ಹೊಣೆಗಾರಳಾಗುತ್ತೀ. ಅದಕ್ಕಾಗಿ ನೀನೇ ಅವಳೊಂದಿಗೆ ಒಂದಿಷ್ಟು ಅಂತರವನ್ನು ಕಾಯ್ದುಕೊಂಡು ಬಿಟ್ಟರೆ ಒಳ್ಳೆಯದಲ್ಲವೇ?...'**